ಅದಕ್ಕೇ ನಾವು 148 ಸೇತುವೆಗಳನ್ನು ಮಾಡತಕ್ಕದ್ದರ ಬಗ್ಗೆ ಬೇರೆ ಕಡೆಗಳಲ್ಲಿ, ಹಾಗೆಯೇ ಬೀದರ್ ಜಿಲ್ಲೆಯಲ್ಲೂ ಕೂಡ ತೆಗೆದುಕೊಂಡಿದ್ದೇವೆ. ಸ್ವಲ್ಪ ಕ್ಷೇತ್ರಕ್ಕೂ ಕೂಡ ಹೋಗಿ ಬಂದಿದ್ದೇವೆ. ಆ ರೀತಿ ಅಲ್ಲಿಗೂ ಹೋಗಿದ್ದೇವೆ. ಆ ಸಾಯಿಗಾಂವ್ ಬ್ರಿಡ್ಜ್ ಈ ಹಿಂದೆಯೇ ವಿರೇಂದ್ರ ಪಾಟೀಲರ ಕಾಲದಲ್ಲಿ 1964ರಲ್ಲಿ ಆಗಿದ್ದು ಅಲ್ಲಿ ಜನರು ಹೋಗುವುದಕ್ಕೆ ಆಗುತ್ತಿರಲಿಲ್ಲ. ಅದಕ್ಕೆ ನಾವು ಏನು ಮಾಡಿದ್ದೇವೆಂದರೆ, ಸುಮಾರು 13 ಕೋಟಿ ರೂ.ಗಳ ವೆಚ್ಚದಲ್ಲಿರುವ ಕೆಲಸವೇನಿದೆ ಅದು ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಬರುತ್ತಿದ್ದು ಈ ಬಗ್ಗೆ ಕ್ಯಾಬಿನೆಟ್ ಸಬ್ ಕಮಿಟಿ ಮುಂದೆ ಕೂಡ ವಿಚಾರವಿದೆ. ಅದರ ಬಗ್ಗೆ ನಾವು ಏನು ಆಶ್ವಾಸನೆಯನ್ನು ಕೊಟ್ಟಿದ್ದೇವೆ ಆ ಪ್ರಕಾರ ಈ ವರ್ಷ ಮಾಡತಕ್ಕದ್ದರ ಬಗ್ಗೆ ಕೂಡ ಭರವಸೆಯನ್ನು ಕೊಡುತ್ತೇನೆ.

ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಅಬ್ಬಿಕೆರೆ ಗ್ರಾಮ ಪಂಚಾಯತಿಯ ಲಕ್ಷ್ಮೀಪುರದ ಗೊಮಾಳವನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಬಗ್ಗೆ

230 (2465) ಶ್ರೀ ಅಶೋಕ್ ಆರ್. (ಉತ್ತರಹಳ್ಳಿ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಅಬ್ಬಿಕೆರೆ ಗ್ರಾಮ ಪಂಚಾಯಿತಿಯ ಲಕ್ಷ್ಮೀಪುರ ಗ್ರಾಮದ ಸರ್ವೆ ನಂ. 11ರಲ್ಲಿ ಸರ್ಕಾರಿ ಗೋಮಾಳದ ಜಮೀನು ಎಷ್ಟು ಎಕರೆಗಳಿವೆ;

ಆ. ಈ ಜಮೀನಿನಲ್ಲಿ ಬಗರ್‌ಹುಕುಂ ಸಾಗುವಳಿ ಫಲಾನುಭವಿಗಳಿಗೆ ಎಷ್ಟು ಎಕರೆ ಜಾಗವನ್ನು ವಿತರಿಸಲಾಗಿದೆ ;

ಇ. ಉಳಿಕೆ ಜಮೀನನ್ನು ಬೋಗಳ್ಳರು ಕಬಳಿಸಿದ್ದಾರೆಯೇ; ಹಾಗಿದ್ದರೆ ಅವರುಗಳ ಹೆಸರುಗಳನ್ನು ತಿಳಿಸುವುದು;

ಈ. ಆ ಜಾಗವನ್ನು ಯಾವಾಗ ತೆರವುಗೊಳಿಸಲಾಗುವುದು; ಅದಕ್ಕೆ ಕಾಲಮಿತಿ ಹಾಕಿಕೊಳ್ಳಲಾಗುವುದೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ. 103-14 ಎಕರೆ ಜಮೀನಿರುತ್ತದೆ.

ಆ. 72.00 ಎಕರೆ ವಿತರಿಸಲಾಗಿದೆ.

ಇ. ಹೌದು, ವಿವರಗಳನ್ನು ಈ ಕೆಳಕಂಡಂತೆ ಇರುತ್ತದೆ.

ಹೆಸರು	ವಿಸ್ತೀರ್ಣ ಎಕರೆ
ಕೆ.ವಿ. ಪ್ರಕಾಶ್	3.00
ಹುಚ್ಚಪ್ಪ ಮತ್ತು ಗಂಗಪ್ಪ	2.00 ತಲಾ 1.00
ಸೈಯದ್ ನೂರು ಅಹಮದ್ ಹಾಗೂ ರಾಮಕೃಷ್ಣ	4.00 ತಲಾ 2.00
ಎನ್. ಹರಿಹರ	1.00
ಲಿಂಗಚಾರಿ	1.00

ಹೆಸರು	ವಿಸ್ತೀರ್ಣ ಎಕರೆ
ಮುನಿಸ್ವಾಮಿ	1.00
ಹನ್ನೂರ್ ಬೈಲ	1.00
ದಾಸನಪುರ ಬೈಲ	1.00
ಗಂಗಯ್ಯ	1.00
ವೆಂಕಟಪ್ಪ	1.00
ಹುಚ್ಚಪ್ಪ	1.00
ಕೆಂಪ	1.00
ಅಂಜನಪ್ಪ	1.00
ಹೆಚ್. ಗಂಗಯ್ಯ	1.00
ಶ್ರೀ ಕಂಠಯ್ಯ	1.00
ಒಟ್ಟು	21.00

ಈ. ವಿಶೇಷ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ಹಾಗೂ ಸಿವಿಲ್ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳು ಇತ್ಯರ್ಥವಾದ ನಂತರ ಅತಿಕ್ರಮಣದಾರರನ್ನು ಹೊರದೂಡಿ ಜಮೀನನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲಾಗುವುದು. ಇದಕ್ಕೆ ಕಾಲಮಿತಿ ಇಲ್ಲ.

ಶ್ರೀ ಆರ್. ಅಶೋಕ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ತಮ್ಮ ಮೂಲಕ ನಾನು ಕೇಳಿದ್ದ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಸರ್ಕಾರಿ ಜಮೀನನ್ನು ಎಷ್ಟು ಎಕರೆ ಭೂಕಬಳಿಕೆಯನ್ನು ಮಾಡಿದ್ದಾರೆ ಎಂಬುದಕ್ಕೆ ಒಟ್ಟು 21 ಎಕರೆ ಎಂದು ಹೇಳಿದ್ದಾರೆ. ಪದೇ ಪದೇ ಈ ಪ್ರಶ್ನೆಯನ್ನು ಕಳೆದ ಮೂರು ವರ್ಷಗಳಿಂದ ಕೇಳುತ್ತಲಿದ್ದೇನೆ. ಬೆಂಗಳೂರಿನ ಸುತ್ತಮುತ್ತ ಇರತಕ್ಕಂಥ ಸರ್ಕಾರಿ ಜಮೀನನ್ನು ರಕ್ಷಣೆ ಮಾಡುವ ನಿಟ್ಟಿನಲ್ಲಿ ಸರ್ಕಾರಕ್ಕೆ ಜವಾಬ್ದಾರಿ ಇದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ಸರ್ಕಾರದ ಮೇಲೆ ನಮಗೆ ನಂಬಿಕೆಯೇ ಹೊರಟುಹೋಗಿದೆ. ಏಕೆಂದರೆ ಸುಮಾರು ಒಂದು ಎಕರೆಗೆ 20 ಲಕ್ಷ ರೂ.ಗಳ ಆದಾಯ ಬರಬಹುದಾದ ಸುಮಾರು 21 ಎಕರೆ ಜಮೀನನ್ನು ಕೆಲವರು ಭೂಕಬಳಿಸಿದ್ದಾರೆ. ಇದರಿಂದ ಸರ್ಕಾರಕ್ಕೆ ಬರಬಹುದಾದ ಆದಾಯದಲ್ಲಿ ಪೋಲಾಗಿದೆ. ಸರ್ಕಾರದವರೇ ಇಷ್ಟು ಜನರು ಇಂಥವರು ಇದ್ದಾರೆ ಎಂಬ ಬಗ್ಗೆ ಲಿಸ್ಟ್‌ನ್ನು ನಮಗೆ ಕೊಟ್ಟಿದ್ದಾರೆ. ಇಂಥವರ ಮೇಲೆ ಏಕೆ ಇನ್ನೂ ಕ್ರಮ ಕೈಗೊಂಡಿಲ್ಲವೆಂದು ಕೇಳಿದರೆ, ಅವರೆಲ್ಲರೂ ಕೋರ್ಟಿಗೆ ಹೋಗಿದ್ದಾರೆ ಎಂದಿದ್ದಾರೆ. ಇದೊಂದು ರೀತಿ ಕಳ್ಳ ಪೊಲೀಸ್ ಆಟವಾಗಿದೆ. ನೀವು ಕೋರ್ಟಿನಿಂದ ಸ್ಟೇ ತಂದಹಾಗೆ ತನ್ನಿ ಎಂದು ಹೇಳುವ ರೀತಿಯಲ್ಲಿ ಈ ಕೆಲಸ ಆಗುತ್ತಿದೆ. ಈಗೇನು 21 ಎಕರೆಗೆ ಸ್ಟೇ ತಂದಿದ್ದಾರೆ ಎಂದು ಹೇಳಿದ್ದಾರೆ ಅಷ್ಟೂ ಜಮೀನಿನಲ್ಲಿ ಲೇಔಟ್ ಫಾರ್ಮೇಶನ್ ಆಗಿದೆ, ಅಷ್ಟೂ ಜಮೀನಿನಲ್ಲಿ ಕಮರ್ಶಿಯಲ್ ಕಾಂಪ್ಲೆಕ್ಸ್ ಇದೆ. ವೈನ್‌ಸ್ಟೋರ್, ಬಾರ್ ಮತ್ತು ಇನ್ನೇನು ಅಂಗಡಿಗಳು ಬೇಕೋ ಅವಷ್ಟೂ ಇರೆ. ಸನ್ಮಾನ್ಯ ಸಚಿವರ ಗಮನಕ್ಕೆ ಇದು ಬರಲಿಲ್ಲವೆ? ಕೇಸ್ ಇದೆಯೆಂದು ಹೇಳಿದ್ದಾರೆ. ಕೇಸ್ ಇದ್ದರೆ ಇವನ್ನೆಲ್ಲಾ ಹೇಗೆ ಕಟ್ಟುತ್ತಾರೆ? ಲೇಔಟ್‌ನ್ನು ಹೇಗೆ ನಿರ್ಮಾಣ ಮಾಡುತ್ತಾರೆ? ಸರ್ಕಾರಕ್ಕೆ ಇದರ ಬಗ್ಗೆ ಬದ್ಧತೆ ಇಲ್ಲವೆ? ಅನ್‌ಲೈನ್ ಲಾಟರಿ

ಮಾಡುವುದರಿಂದ ಸರ್ಕಾರಕ್ಕೆ ಆದಾಯ ಬರುತ್ತದೆ ಎಂದು ಹೇಳುತ್ತಾರೆ. ನಾನು ಹೇಳುವುದೇನೆಂದರೆ ಈ ಭೂಕಬಳಿಕೆಯನ್ನು ವಶಪಡಿಸಿಕೊಳ್ಳುವ ಕ್ರಮ ತೆಗೆದುಕೊಂಡರೆ ಒಂದೇ ವರ್ಷದಲ್ಲಿ ಸಾವಿರಾರು ಕೋಟಿ ರೂ.ಗಳ ಆದಾಯ ಸರ್ಕಾರಕ್ಕೆ ಬರುತ್ತದೆ. ಇದರ ಬಗ್ಗೆ ಏಕೆ ಸರ್ಕಾರ ಕ್ರಮ ತೆಗೆದುಕೊಂಡಿಲ್ಲ? ಈಗೇನು ಸರ್ಕಾರಿ ಜಮೀನಿನಲ್ಲಿ ಕಟ್ಟಲಾಗಿದೆ ಅದನ್ನು ಸರ್ಕಾರ ತೆರವು ಮಾಡಿಸಿ ಅದನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವ ಸರ್ಕಾರದ ಕರ್ತವ್ಯವೇ ಅಥವಾ ಅಲ್ಲವೇ ಎಂಬ ಬಗ್ಗೆ ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :- ಮಾನ್ಯ ಅಧ್ಯಕ್ಷರೆ, ಈಗೇನು ಮಾನ್ಯ ಅಶೋಕ್‌ರವರು ಹೇಳಿದ್ದಾರೆ ಆ ಜಾಗವನ್ನು ಸರ್ಕಾರ ತೆರವು ಮಾಡಿಸಿ ವಜಾ ಮಾಡಲಾಗಿದೆ. ಆದರೆ ಅದರಲ್ಲಿ ಒಬ್ಬರು ಸುಪ್ರೀಂಕೋರ್ಟ್‌ಗೆ ಹೋಗಿ ಸ್ಟೇ ತೆಗೆದುಕೊಂಡು ಬಂದಿದ್ದಾರೆ. ಇನ್ನೊಬ್ಬರು ಸಿವಿಲ್ ಕೋರ್ಟ್‌ನಿಂದ ಸ್ಟೇ ತಗೆದುಕೊಂಡು ಬಂದಿದ್ದಾರೆ. ಅದು ಈಗ ನಮ್ಮ ಸ್ಪೆಶಲ್ ಡಿ.ಸಿ.ಯವರ ಕನ್ಸಿಡರೇಶನ್‌ನಲ್ಲಿ ಇದೆ. ಆದಷ್ಟು ಜಾಗ್ರತೆ ಅದನ್ನು ತೆರವು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಈಗಾಗಲೇ ತೆರವು ಮಾಡಿ ವಜಾ ಮಾಡಲಾಗಿದೆ. ವಜಾ ಮಾಡಿದ ಮೇಲೆ ಮತ್ತೆ ಅವರು ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬಂದಿದ್ದಾರೆ.

ಶ್ರೀ ಆರ್. ಅಶೋಕ್ :- ಕೋರ್ಟಿಗೆ ಹೋಗಿ ಸ್ಟೇ ತೆಗೆದುಕೊಂಡು ಬಂದಿರುವವರು ಕೇವಲ ಇಬ್ಬರೇ ಇಬ್ಬರು. ಇನ್ನು ಒಂಬತ್ತು ಜನರು ಕೋರ್ಟಿಗೆ ಹೋಗಿಲ್ಲ. ಇವರು ಅವರಿಗೋಸ್ಕರ ಉಳಿದಂಥ 20 ಎಕರೆ ಸರ್ಕಾರಿ ಜಮೀನನ್ನು ಹಾಳುಮಾಡಿದರೆ ಹೇಗೆ? ಈಗ ತಾವು ಯೋಚನೆ ಮಾಡಿ, ಬೇರೆ ಯಾರಾದರೂ ಅವರ ಸ್ವಂತ ಜಮೀನಿನಲ್ಲಿ, ಬಿ.ಡಿ.ಎ. ಜಾಗದಲ್ಲಿ ಸ್ವಂತ ಮನೆಯನ್ನು ಕಟ್ಟಿಕೊಂಡಿದ್ದರೂ ಕೂಡ ಡೆಮಾಲಿಶ್ ಮಾಡುತ್ತೀರಿ. ಇದು ಸರ್ಕಾರಿ ಜಮೀನು. ಸರ್ಕಾರಿ ಜಮೀನಿನಲ್ಲಿ ಕಮರ್ಶಿಯಲ್ ಕಾಂಪ್ಲೆಕ್ಸ್ ಕಟ್ಟುತ್ತಾರೆ, ಲೇಔಟ್ ಮಾಡುತ್ತಾರೆ ಎಂದರೆ ಸರ್ಕಾರವೇನಾದರೂ ನಿದ್ರೆ ಮಾಡುತ್ತಿದೆಯೆ? ಇದರ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವ ಬಗ್ಗೆಯಾದರೂ ದಯವಿಟ್ಟು ಉತ್ತರ ಹೇಳಬೇಕು. ನಾನು ಈಗಾಗಲೇ ಈ ಹಿಂದೆ ದಾಸರಹಳ್ಳಿಯಲ್ಲೂ ಇಂಥ ಕನ್ಸ್‌ಸ್ಟ್ರಕ್ಷನ್ ನಡೆದಿರುವ ಬಗ್ಗೆ ಹೇಳಿದಾಗ ಮಾನ್ಯ ಸಚಿವರು ಉತ್ತರಿಸಿ ಕೂಡಲಿ ಅದನ್ನು ಡೆಮಾಲಿಶ್ ಮಾಡಿಸುತ್ತೇವೆ ಎಂದಿದ್ದರು. ಮೊನ್ನೆ ಫೋನ್ ಮಾಡಿ ಈಗ ಮಾಡಿ ಎಂದು ಹೇಳಿದರು. ಕಳೆದ ವರ್ಷ ಡೆಮಾಲಿಶ್ ಮಾಡಿಸುತ್ತೇವೆ ಎಂದು ಹೇಳಿದ್ದರೂ ಇದುವರೆಗೆ ಡೆಮಾಲಿಶ್ ಮಾಡಿಲ್ಲ. ಹೀಗೆಯೇ ಹೇಳುತ್ತಾ ಇದ್ದಾರೆ. ದಯವಿಟ್ಟು ಸಚಿವರು ಬೇಕಾದರೆ ಇನ್ನೂ ಒಂದು ವರ್ಷ ಟೈಮ್ ತೆಗೆದುಕೊಳ್ಳಲಿ, ನಿಧಾನವಾದರೂ ಪರವಾಗಿಲ್ಲ. ಇದನ್ನು ಯಾವಾಗ ಡೆಮಾಲಿಶ್ ಮಾಡಿಸುತ್ತಾರೆ ಹಾಗೂ ತೆರವು ಮಾಡಿಸಿ ಸರ್ಕಾರದ ವಶಕ್ಕೆ ಯಾವಾಗ ತೆಗೆದುಕೊಳ್ಳುತ್ತಾರೆ ಎಂಬ ಬಗ್ಗೆ ಹೇಳಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರನ್ನೂ ಜೊತೆಗೆ ಕರೆದುಕೊಂಡು ಹೋಗಿ ತೆರವು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಆರ್. ಅಶೋಕ್ :- ಪ್ರಯತ್ನ ಅಲ್ಲ. ತೆರವು ಮಾಡಿಸುತ್ತೇವೆ ಎಂದು ಹೇಳಿ ಅಷ್ಟೇ ಸಾಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :- ಏಕೆಂದರೆ ಅದು ಸ್ಪೆಷಲ್ ಡೆಪ್ಯುಟಿ ಕಮಿಶನರ್‌ರವರ ಕೋರ್ಟ್‌ನಲ್ಲಿದೆ.

ಶ್ರೀ ಆರ್. ಅಶೋಕ್ :- ಪ್ರಯತ್ನ ಎನ್ನಬೇಡಿ. ಮಾಡುತ್ತೇವೆ ಎಂದು ಹೇಳಿ. ಆದೇಶ ಕೊಡುತ್ತೇನೆ ಎಂದು ಹೇಳಿ. ಏಕೆಂದರೆ ಪ್ರಯತ್ನ ಎಂದರೆ ಅಲ್ಲಿಗೇ ಮುಗಿಯಿತು ಎಂದರ್ಥ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :- ಆಯಿತು, ಈಗಾಗಲೇ ಸ್ಪೆಷಲ್ ಡಿ.ಸಿ.ಯವರಿಗೆ ಸರ್ಕಾರ ನಿರ್ದೇಶನ ಕೊಟ್ಟಿದೆ. ಅದಷ್ಟು ಜಾಗ್ರತೆ ಈಗ ಯಾವುದಕ್ಕೆ ಸ್ಟೇ ಆರ್ಡರ್ ಇಲ್ಲವೋ ಅದನ್ನು ತೆರವು ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಆರ್. ಅಶೋಕ್ :- ಕಳೆದ ಸದನದಲ್ಲೂ ತಾವು ಉತ್ತರಿಸುತ್ತಾ ಬೆಂಗಳೂರಿನ ಸುತ್ತಮುತ್ತಲೂ ಭೂಗಳ್ಳರು ಜಾಸ್ತಿ ಇದ್ದಾರೆ. ಇದಕ್ಕೆ ಒಂದು ಟಾಸ್ಕ್‌ಫೋರ್ಸ್ ಮಾಡಿ ಬೆಂಗಳೂರಿನ ಸುತ್ತಮತ್ತಲೂ ಇರುವ ಸರ್ಕಾರಿ ಜಮೀನಿನ ರಕ್ಷಣೆ ಮಾಡಲಾಗುವುದು ಎಂದಿದ್ದೀರಿ. ಆದರೆ ಇದುವರೆಗೂ ಆ ಟಾಸ್ಕ್‌ಫೋರ್ಸ್ ಮಾಡಲೇ ಇಲ್ಲ. ಅದುದರಿಂದ ಸರ್ಕಾರಿ ಜಮೀನನ್ನು ವಶಪಡಿಸಿಕೊಳ್ಳುವ ನಿಟ್ಟಿನಲ್ಲಿ ಈ ಟಾಸ್ಕ್‌ಫೋರ್ಸ್‌ನ್ನು ಯಾವಾಗ ಮಾಡುತ್ತೀರಿ ಎಂಬ ಬಗ್ಗೆ ಹೇಳಬೇಕು.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :- ಈಗಾಗಲೇ ಅನೇಕ ಕೇಸ್‌ಗಳಲ್ಲಿ ಸರ್ಕಾರ ವಶಕ್ಕೆ ತೆಗೆದುಕೊಳ್ಳುತ್ತಿದ್ದು ಈಗಾಗಲೇ ಸುಮಾರು 400 ಕೋಟಿ ರೂ.ಗಳ ಬೆಲೆಬಾಳುವ ಸ್ವತ್ತನ್ನು ವಶಕ್ಕೆ ತೆಗೆದುಕೊಳ್ಳಲಾಗಿದೆ.

ಶ್ರೀ ಆರ್. ಅಶೋಕ್ :- ಅದು ಬಿ.ಡಿ.ಎ. ಯದ್ದು. ಅದನ್ನು ಬಿಟ್ಟುಬಿಡಿ. ಬೆಂಗಳೂರು ಸುತ್ತಮುತ್ತಲಿರುವ ಸರ್ಕಾರದ ರೆವಿನ್ಯೂ ಜಾಗದ ಬಗ್ಗೆ ಹೇಳಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ :- ರೆವಿನ್ಯೂ ಜಮೀನಿನ ಬಗ್ಗೆ ನಿಮಗೆ ವಿವರವಾದ ವಿವರಣೆಯನ್ನು ಕೊಡುತ್ತೇನೆ. ಯಾವ ಯಾವುದನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಬಹುದು ಎಂಬ ಬಗ್ಗೆ ಹೇಳುತ್ತೇನೆ. ಇನ್ನು ಟಾಸ್ಕ್‌ಫೋರ್ಸ್ ಯಾವಾಗ ಮಾಡುತ್ತೀರಿ ಎಂಬ ಬಗ್ಗೆ ತಾವು ಕೇಳಿದ್ದೀರಿ. ಅದನ್ನು ಆದಷ್ಟು ಶೀಘ್ರವಾಗಿ ಮಾಡುತ್ತೇನೆ.

ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ

231 (2235) ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ನಿರ್ಮಾಣದ ಯೋಜನೆಯನ್ನು ಎಂದು ಘೋಷಣೆ ಮಾಡಲಾಯಿತು;

ಆ. ಈಗ ಯೋಜನೆಯು ಯಾವ ಹಂತದಲ್ಲಿದೆ; ಸದರಿ ಯೋಜನೆಯ ಮುಖ್ಯ ಉದ್ದೇಶಗಳೇನು;

ಇ. ಈ ಎಕ್ಸ್‌ಪ್ರೆಸ್ ಹೆದ್ದಾರಿಯ ಉದ್ದವೆಷ್ಟು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು)

ಅ. ಕಲ್ಯಾಣಿ ಗ್ರೂಪ್ ಸಂಸ್ಥೆಯವರೊಡನೆ ದಿನಾಂಕ 20.2.1995ರಂದು ಸರ್ಕಾರವು ಒಡಂಬಡಿಕೆ ಪತ್ರಕ (MOU) ಸಹಿ ಮಾಡಿದ್ದು, 3.4.1997ರಂದು ಫ್ರೇಮ್‌ವರ್ಕ್ ಕರಾರು ಒಪ್ಪಂದದ ದಿನಾಂಕದಿಂದ ಸದರಿ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್ ಹೆದ್ದಾರಿ ನಿರ್ಮಾಣದ ಯೋಜನೆಯನ್ನು ಮೆ:ನಂದಿ ಇನ್ ಪ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ ಲಿ. ಇವರಿಗೆ ನಿರ್ಮಾಣ,